ಪಿಡಬ್ಲೂ.1: ಜೈಬುನ್ನಿಸ.,

<u>ದಿನಾಂಕಃ 03.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**(ಸಾಕ್ಷಿಗೆ ಉರ್ದು ಮಾತ್ರ ಬರುತ್ತಿದ್ದು ಕನ್ನಡ ಬಾರದ ಕಾರಣ ಶ್ರೀಮತಿ. ತನುಜ.ವಿ, ವಕೀಲರನ್ನು ಭಾಷಾಂತರ ಕಾರರಾಗಿ ನೇಮಕ ಮಾಡಿಕೊಳ್ಳಲಾಯಿತು.)**

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ನವೀದ್ ಪಾಷ ನನ್ನ ಮಗ. ಅಬ್ದುಲ್ ರೌಫ್ ನನ್ನ ಗಂಡ. ನಾನು ಬ್ಯಾಂಕಿನಲ್ಲಿ ಖಾತೆದಾರಳಾಗಿರುತ್ತೇನೆ, ಆದರೆ ಎಷ್ಟು ವರ್ಷಗಳಿಂದ ಖಾತೆದಾರಳಾಗಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಇಫಾ ಟ್ರಾವೆಲ್ಸ್ ನೂರುಲ್ಲ ಷರೀಫ್ ರವರ ಹೆಸರಿನಲ್ಲಿದೆ. ಹಜ್ ಬ್ರೋಚರ್ ಅನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಿ ಬ್ರೋಚರ್ ಯಾವುದು ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ ಎಂದು ನುಡಿಯುತ್ತಾರೆ. ಅವರ ಮನೆಯ ಬಳಿ ಮರದ ಮೇಲೆ ಜಾಹಿರಾತನ್ನು ಹಾಕಿರುವುದನ್ನು ನೋಡಿ ಪಿರ್ಯಾದುದಾರರು ಆರೋಪಿಯನ್ನು ಹಜ್ ಯಾತ್ರೆಗಾಗಿ ಭೇಟಿ ಮಾಡಿದ್ದರು. ಜಾಹಿರಾತಿನಲ್ಲಿ ಇದ್ದಂತಹ ಹೆಸರು, ವಿಳಾಸ ಮತ್ತು ಫೋನ್ ನಂಬರನ್ನು ಹೇಳಲು ಸಾಧ್ಯವೇ ಎಂದರೆ ಸಾಕ್ಷಿಯು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. 2019 ನೇ ಮೇ ಯಿಂದ ಜುಲೈ ರವರೆಗೆ ನಿಮ್ಮ ಖಾತೆಯಲ್ಲಿ ಹಣವಿತ್ತೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಈಗ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಹಜ್ ಯಾತ್ರೆ ಪ್ರಯಾಣಕ್ಕಾಗಿ ನಾನು ಆರೋಪಿಗೆ ನಗದು ಮುಖಾಂತರ ಹಣ ನೀಡಿದ್ದೆನು ಅದಕ್ಕೆ ಸಂಬಂಧಿಸಿದ ರಶೀದಿಗಳನ್ನು ಹಾಜರುಪಡಿಸಿದ್ದೇನೆ.

**2.** 2019 ನೇ ಇಸವಿಯಲ್ಲಿ ನಾನು ಮತ್ತು ನನ್ನ ಮಗ ಆರೋಪಿಯನ್ನು ಭೇಟಿ ಮಾಡಿ

10 ಲಕ್ಷ ರೂ.ಗಳನ್ನು ಆರೋಪಿಗೆ ನೀಡಿದ್ದೆವು. ನನ್ನ ಗಂಡ ಸೇನಾಪಡೆಯಿಂದ ನಿವೃತ್ತಗೊಂಡಿದ್ದು ಅದನ್ನು ಇಟ್ಟುಕೊಂಡಿದ್ದೆನು, ಅದನ್ನು ಹಜ್ ಯಾತ್ರೆಗಾಗಿ ಟಿಕೆಟ್ ಪಡೆಯಲು ಆರೋಪಿಗೆ ನೀಡಿದ್ದೆನು. 2019 ನೇ ಜೂನ್ ನಲ್ಲಿ ಬದುಕಿದ್ದರು. ನನ್ನ ಗಂಡ ನಿವೃತ್ತಿ ವೇತನವನ್ನು ನಗದಾಗಿ ಸ್ವೀಕರಿಸಿದರೋ ಅಥವಾ ಬ್ಯಾಂಕ್ ಮೂಲಕ ಸ್ವೀಕರಿಸಿದರೋ ನನಗೆ ಗೊತ್ತಿಲ್ಲ. ನಿಮ್ಮ ಗಂಡನಿಗೆ ನಿವೃತ್ತಿ ಹಣ ಬಂದಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ 10 ಲಕ್ಷ ರೂ.ಗಳನ್ನು ನೀಡಿರುವ ಬಗ್ಗೆ ನೀವು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 10 ಲಕ್ಷ ರೂ.ಗಳನ್ನು ನೀವು ಆರೋಪಿಗೆ ಯಾವ ರೀತಿ ನೀಡಿದ್ದೀರಿ ಎಂದು ದೂರು ಅಥವಾ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ರಶೀದಿಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. 10 ಲಕ್ಷ ರೂ.ಗಳು ನನ್ನ ಸ್ವಂತ ಹಣವಾಗಿತ್ತು. ನಿಮ್ಮ ಬಳಿ ರೂ.6,75,000/- ಗಳು ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ರಶೀದಿಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

**3.** ನೀವು ಹಾಜರುಪಡಿಸಿರುವ ರಶೀದಿಗಳನ್ನು ನಿಮ್ಮ ಹೆಸರು ನಮುದಾಗಿರುವುದಿಲ್ಲ, ನವೀದ್ ಪಾಷ ಎಂದು ನಮುದಾಗಿರುತ್ತದೆ ಎಂದರೆ ಅವರು ನನ್ನ ಮಗ ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿ ನಮೂದಿಸಿರುವ ರೂ.6,75,000/- ಗಳನ್ನು ನೀವು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ರಶೀದಿಯಲ್ಲಿ ನಹೀಮ್ ಎಂಬುವವರು ಸಹಿ

ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಹಣವನ್ನು ಆರೋಪಿಗೆ ನೀಡಿದ್ದೆನು, ಸಹಿ ಯಾರು ಮಾಡಿದ್ದರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.6 ಮತ್ತು ನಿ.ಪಿ.1 ರಲ್ಲಿನ ಆರೋಪಿಯ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.1 ರಲ್ಲಿನ ಸಹಿಯನ್ನು ಹೊರುತುಪಡಿಸಿ ಅದರಲ್ಲಿನ ಬರವಣಿಗೆಯನ್ನು ಆರೋಪಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಇಫಾ ಹಜ್ ಟ್ರಾವೆಲ್ಸ್ ಆರೋಪಿಗೆ ಸಂಬಂಧಿಸಿದ್ದಲ್ಲ Nayween ಎಂಬ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಆರೋಪಿ ಯಾವಾಗ ಚೆಕ್ಕನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ನನಗೆ 10 ಲಕ್ಷ ರೂ.ಗಳನ್ನು ಆರೋಪಿಗೆ ನೀಡುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ರಲ್ಲಿನ ಸಹಿ ನನ್ನದು. ನೋಟೀಸಿನಲ್ಲಿ ಬರೆದಿರುವ ವಿಷಯ ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯು ಅದನ್ನು ಓದಿ ಹೇಳಿದ್ದಲ್ಲಿ ನಾನು ಹೇಳುತ್ತೇನೆ ಎಂದು ನುಡಿಯುತ್ತಾರೆ. ನಾನು ಹಜ್ ಯಾತ್ರೆಗಾಗಿ 4 ಜನರಿಗೆ ಟಿಕೆಟ್ ಬುಕ್ ಮಾಡಿದ್ದೆವು. ಪ್ರತಿಯೊಬ್ಬರಿಗು ತಲಾ ರೂ.2,50,000/- ಗಳಂತೆ ಹಣ ನೀಡಿದ್ದೆವು. 4 ಜನರ ಬ್ಯಾಂಕ್ ಖಾತೆ ಇದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಾಕಶ ಕೋರಿದ್ದು, ಮುಂದೂಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ